**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.112/2022**

ಸಾಕ್ಷಿಯನ್ನು ದಿಃ **13.02.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಯ ಮೇಲಿನ ಆದೇಶದಂತೆ ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರಃಶ್ರೀ.** R.K **ವಕೀಲರಿಂದ**:

ನನಗೆ ಪ್ರತಿವಾದಿಯರ ಕುಟುಂಬ 7-8 ವರ್ಷಗಳಿಂದ ಗೊತ್ತು. ಚಂದ್ರೇಗೌಡರಿಗೆ 3 ಜನ ಹೆಣ್ಣು ಮಕ್ಕಳು. ಒಬ್ಬ ಗಂಡು ಮಗ. ಅವರ ಮಗನ ಹೆಸರು ಕಾಂತರಾಜು. 2 ರಿಂದ 4ನೇ ಪ್ರತಿವಾದಿಯರಿಗೆ ಮದುವೆಯಾಗಿದೆ. 2ನೇ ಪ್ರತಿವಾದಿಯ ಗಂಡನ ಹೆಸರು ಮಾದೇಶ. ಅವರು ಹೊನ್ನೆಮರದ ಕಾಲೋನಿ ವಾಸಿ. 3ನೇ ಪ್ರತಿವಾದಿಯ ಗಂಡನ ಹೆಸರು ರವಿ. ಅವರು ಹೊನ್ನೆಮರದ ಕಾಲೋನಿ ವಾಸಿ. 4ನೇಪ್ರತಿವಾದಿಯ ಗಂಡನ ಹೆಸರು ಗೊತ್ತಿಲ್ಲ. ಅವರು ಹೊನ್ನೆಮರದ ಕಾಲೋನಿ ವಾಸಿ. 1ನೇ ಪ್ರತಿವಾದಿಯ ಗಂಡ ಇದ್ದಾರೆ. 1ನೇ ಪ್ರತಿವಾದಿಯ ಗಂಡನಿಗೆ ಹಣದ ವ್ಯವಹಾರದ ಬಗ್ಗೆ ಮಾಹಿತಿ ಇದೆಯೇ ಎಂದರೆ ಅವರೇ ಪತ್ರ ತೆಗೆದುಕೊಂಡು ಬಂದು ಬರೆಸಿದ್ದಾರೆ. ಅವರು ಸಾಲಗಾರರಲ್ಲ. 1 ರಿಂದ 4ನೇ ಪ್ರತಿವಾದಿಯ ಹೆಸರಿನಲ್ಲಿ ಪತ್ರ ಖರೀದಿಸಿಲ್ಲ. ಪತ್ರವನ್ನು ವಕೀಲರ ಕಚೇರಿಯಲ್ಲಿ 1ನೇ ಪ್ರತಿವಾದಿ ಬರೆಸಿದ್ದಾರೆ. 1 ರಿಂದ 4ನೇ ಪ್ರತಿವಾದಿಯರ ವಿಳಾಸದ ಗುರುತಿನ ಬಗ್ಗೆ ದಾಖಲೆ ಕೊಟ್ಟಿದ್ದಾರೆ. ದಾಖಲೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಪ್ರತಿವಾದಿಯರೇ ವಿಳಾಸ ನೀಡಿ ಬರೆಸಿದ್ದಾರೆ. ದಾಖಲೆಯಲ್ಲಿ ಪ್ರತಿವಾದಿಯರ ಆಧಾರ್ ಸಂಖ್ಯೆ ನಮೂದಿಸಿದ್ದಿರಾ ಎಂದರೆ ಇರಬಹುದು. ನಿಪಿ-1ರಲ್ಲಿ 2 ರಿಂದ 4ನೇ ಪ್ರತಿವಾದಿಯರ ಗಂಡನ ಹೆಸರು ಮತ್ತು ವಿಳಾಸವನ್ನು ನಮೂದಿಸಿದ್ದಿರಾ ಎಂದರೆ ನಮೂದಿಸಲಾಗಿದೆ. ಆ ರೀತಿ ಯಾವುದನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

ನಾನು SBIನಲ್ಲಿ ಖಾತೆ ಹೊಂದಿದ್ದೇನೆ. ಈ ದಾವೆಯಲ್ಲಿ ಹೇಳಿದಂತೆ ನಡೆದಿದೆ ಎನ್ನುವ ಹಣದ ವ್ಯವಹಾರ ಸುಮಾರು 5-6ರ ತಿಂಗಳ ಹಿಂದೆ ನಡೆದಿತ್ತು. ಆ ದಿನ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. ಮನೆ ಕಟ್ಟಲು ಹಣ ತಂದಿಟ್ಟಿದ್ದೆ. ನಾನು ಹಣವನ್ನು ಬ್ಯಾಂಕ್ ನಲ್ಲಿ ಇಟ್ಟ ಬಗ್ಗೆ ದಾಖಲೆ ಇದೆಯೇ ಎಂದರೆ ಹಣ ಮನೆಯಲ್ಲಿಯೇ ಇತ್ತು. ಹಣ ಹೇಗೆ ಬಂದಿತ್ತು ಎಂದರೆ ನನ್ನ ದುಡಿಮೆಯಿಂದ ಬಂದಿತ್ತು. ನನ್ನ ಬಳಿ ಪಾನ್ ಕಾರ್ಡ್ ಇದೆ. ನನ್ನ ಬಳಿ ಅಷ್ಟೊಂದು ಹಣ ಇದ್ದ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಘೋಷಣೆ ಮಾಡಿಕೊಂಡಿಲ್ಲ. ಸಾಕ್ಷಿ ಮುಂದುವರಿದು ಆ ಹಣದಲ್ಲಿ ಮನೆ ಕಟ್ಟಲೆಂದು ತೆಗೆದುಕೊಂಡಿದ್ದ ಸ್ವಲ್ಪ ಸಾಲದ ಹಣವು ಇತ್ತು ಎಂದು ನುಡಿಯುತ್ತಾರೆ. ಯಾರ ಬಳಿ ಸಾಲ ಪಡೆದುಕೊಂಡಿದ್ದಿರಿ ಎಂದರೆ ಕಾಮಾಕ್ಷಿ ಅಕ್ಕ ಮತ್ತು ಲಕ್ಷ್ಮಕ್ಕ

ಎಂಬುವವರಿಂದ ಸಾಲ ಪಡೆದಿದ್ದೆ. ಕಾಮಾಕ್ಷಿರವರಿಂದ ರೂ.ಒಂದು ಲಕ್ಷ ಮತ್ತು ಇನ್ನೊಬ್ಬರ ಬಳಿಯಿಂದ ರೂ.50 ಸಾವಿರ ಪಡೆದುಕೊಂಡಿದ್ದೆ. ಅವರಿಬ್ಬರು ಇದ್ದಾರೆ.

1ನೇ ಪ್ರತಿವಾದಿಯ ಮಗ ಕಾಂತರಾಜು ಮೈಸೂರಿನಲ್ಲಿ ಒಂದು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿದ್ದರು ಎಂದರೆ ಸರಿ. ನಾನು ಆತನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲು ಹಾಗೂ ಆ ಪ್ರಕರಣದಲ್ಲಿ ಆತನೊಂದಿಗೆ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಸರಿ. ಆತ ಮತ್ತು ನಾನು ಆತ್ಮಿಯರು ಎಂದರೆ ಆತ್ಮಿಯರೆನಲ್ಲ ಪೂರ್ತಿ ಕುಟುಂಬ ಜೈಲಿಗೆ ಹೋದಾಗ ನಾನು ಬಿಡಿಸಿದ್ದೇನೆ. ಸದರಿ ಪ್ರಕರಣದಲ್ಲಿ ಅವರು ಖುಲಾಸೆಯಾದರು ಎಂದರೆ ಸರಿ. ಈಗ ಕಾಂತರಾಜು ಮತ್ತು ನೀವು ವಿಶ್ವಾಸದಿಂದ ಇದ್ದಿರಾ ಎಂದರೆ ಇಲ್ಲ. ನಿಮಗೂ ಅವರಿಗೂ ಈಗ ವೈಮನಸ್ಸು ಇದೆಯೇ ಎಂದರೆ ಇಲ್ಲ ಹಣ ಕೇಳಲು ಹೋದಾಗ ಕೊಡುವುದಿಲ್ಲ ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿದರು. ಕಾಂತರಾಜುರವರು ಜೈಲಿನಲ್ಲಿದ್ದಾಗ ನಾನು ಹಣ ಖರ್ಚು ಮಾಡಿದ್ದೇನೆ ಎಂದು ಹೇಳಿ ಅವರಿಂದ ಹಣ ಪಡೆದುಕೊಂಡಿದ್ದೆ ಎಂದರೆ ಇಲ್ಲ. ಆ ವಿಚಾರವಾಗಿ ನನಗೂ ಅವರಿಗೂ ಬಿನ್ನಾಭಿಪ್ರಾಯ ಬಂದಿದೆ ಎಂದರೆ ಇಲ್ಲ. ಆ ಕಾರಣದಿಂದ ದಾಖಲೆಯನ್ನು ಸೃಷ್ಟಿ ಮಾಡಿ ಕಾಂತರಾಜು ಮತ್ತು ಅವರ ಕುಟುಂಬದವರಿಗೆ ತೊಂದರೆ ಕೊಡಬೇಕು ಎಂದು ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಸೇರಿ ನಿಪಿ-1ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿದಂತೆ ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಮತ್ತು ಪ್ರತಿವಾದಿಯರು ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

## ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.